*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 24-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

20. ಸಂಜೆ 5.45 ಗಂಟೆಗೆ ನಾನು ಇಲಾಖಾ ವಾಹನದಲ್ಲಿ ಪಂಚರು, ಚಾಲಕ, ಆರೋಪಿ ಮತ್ತು ಸಿಬ್ಬಂದಿಯೊಂದಿಗೆ ಠಾಣೆಯಿಂದ ಹೊರಟು ಆರೋಪಿ ತೋರಿಸಿದ ಮಾರ್ಗದಲ್ಲಿ ಸಂಜೆ 5.55 ಗಂಟೆಗೆ ಸೀಕೆ ಗ್ರಾಮಕ್ಕೆ ತಲುಪಿದೆವು. ಸದರಿ ಗ್ರಾಮದಲ್ಲಿ ಎನ್.ಆರ್.ಪುರ-ಬಾಳೆಹೊನ್ನೂರು ರಸ್ತೆ ಬದಿಯಲ್ಲಿ ಆರೋಪಿ ವಾಹನವನ್ನು ನಿಲ್ಲಿಸುವಂತೆ ತಿಳಿಸಿದಾಗ ವಾಹನವನ್ನು ನಿಲ್ಲಿಸಿದ ಬಳಿಕ ಆತ ವಾಹನದಿಂದ ಇಳಿದು ರಸ್ತೆ ಬದಿಯಲ್ಲಿದ್ದ ಒಂದು ಮನೆಯನ್ನು ತೋರಿಸಿ ಸದರಿ ಮನೆ ತನ್ನ ತಂಗಿಯಾದ ಫ್ರಾಸಾ.1 ರವರದ್ದು ಎಂದು ತಿಳಿಸಿ ತಾನು ಅಲ್ಲಿ ವಾಸವಾಗಿದ್ದಾಗಿ ತಿಳಿಸಿ ಸದರಿ ಮನೆಯಿಂದ ಸುಮಾರು 15 ಅಡಿ ದೂರ ಅಗ್ನೇಯ ದಿಕ್ಕಿಗೆ ಇರುವ

ಒಂದು ಶೆಡ್ ನ್ನು ತೋರಿಸಿ ಸದರಿ ಶೆಡ್ ನ ಒಂದು ಮೂಲೆಯಲ್ಲಿ ಗುದ್ದಲಿ ಬಿದ್ದಿದ್ದಾಗಿ ಅದನ್ನು ತಾನು ರವಿರವರನ್ನು ಕೊಲೆ ಮಾಡಲು ತೆಗೆದುಕೊಂಡಿದ್ದಾಗಿ, ನಂತರ ತಾನು ಸದರಿ ಗುದ್ದಲಿಯಿಂದ ರವಿರವರ ಮೇಲೆ ಹಲ್ಲೆ ಮಾಡಿದ ಬಳಿಕ ಅದನ್ನು ಅದೇ ಶೆಡ್ ನಲ್ಲಿ ಬಿಸಾಡಿದ್ದಾಗಿ ತಿಳಿಸಿದನು. ಸದರಿ ಸ್ಥಳದಲ್ಲಿ ಸಂಜೆ 5.55 ಗಂಟೆಯಿಂದ 7 ಗಂಟೆಯವರೆಗೆ ಮೇಲೆ ಹೇಳಿದ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿದೆನು ಮತ್ತು ಫೋಟೋಗಳನ್ನು ತೆಗೆಸಿದೆನು. ಸದರಿ ಪಂಚನಾಮೆಗೆ ಮೇಲೆ ಹೇಳಿದ ಪಂಚರ ಮತ್ತು ಆರೋಪಿಯ ಸಹಿಯನ್ನು ಪಡೆದೆನು. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.24 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.24(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿ.24(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಫ್ರಾಸಾ.9 ರವರು ನನ್ನ ಸೂಚನೆಯ ಮೇರೆಗೆ ತಮ್ಮ ರೆಡಮೀ ಮೊಬೈಲಿನಲ್ಲಿ ಫೋಟೋಗಳನ್ನು ತೆಗೆದರು. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.25 ರಿಂದ ಪಿ.28 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋಗಳಲ್ಲಿ ನನ್ನೊಂದಿಗೆ ಪಂಚರ ಮತ್ತು ಆರೋಪಿಯ ಇರುವಿಕೆ ಕಂಡುಬರುತ್ತದೆ.

21. ನಂತರ ಠಾಣೆಗೆ ಹಿಂದಿರುಗಿ ಆರೋಪಿಯನ್ನು ಸೂಕ್ತ ಬಂಧನದಲ್ಲಿ ಇರಿಸಿದೆನು. ಮಾರನೆ ದಿನ ಅಂದರೆ ದಿಃ 22-03-2023 ರಂದು ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ಸಿಬ್ಬಂದಿ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿದೆನು. ಅದೇ ದಿನ ಸಿಬ್ಬಂದಿಗಳಾದ ಚಾಸಾ.15 ಮತ್ತು 16 ರವರ ಹೇಳಿಕೆಯನ್ನು ಪಡೆದುಕೊಂಡೆನು.

22. ಪ್ರಕರಣದಲ್ಲಿ ಅಮಾನತು ಪಡಿಸಿಕೊಳ್ಳಲಾಗಿದ್ದ ವಸ್ತುಗಳನ್ನು ಚಾಸಾ.18 ರವರ ಮುಖಾಂತರ ವಿಧಿ ವಿಜ್ಞಾನ ಪರೀಕ್ಷೆಗಾಗಿ ದಿಃ 23-03-2023 ರಂದು ಆರ್ ಎಫ್ ಎಸ್ ಎಲ್ ಮಂಗಳೂರಿಗೆ ಕಳುಹಿಸಿಕೊಟ್ಟೆನು. ಅದೇ ದಿನ ಫ್ರಾಸಾ.9 ರವರ ಹೇಳಿಕೆಯನ್ನು ಪಡೆದುಕೊಂಡೆನು.

23. ಚಾಸಾ.18 ರವರು ಸದರಿ ವಸ್ತುಗಳನ್ನು ಆರ್ ಎಫ್ ಎಸ್ ಎಲ್ ಗೆ ಕೊಟ್ಟು ಹಿಂಬರಹವನ್ನು ಪಡೆದುಕೊಂಡು ದಿಃ 24-03-2023 ರಂದು ನನಗೆ ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ಹಿಂಬರಹವನ್ನು ಮತ್ತು ಅದರಲ್ಲಿರುವ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.51 ಎಂದು ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.51(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.18 ರವರ ಹೇಳಿಕೆಯನ್ನು ಪಡೆದುಕೊಂಡೆನು.

24. ಎಫ್ ಎಸ್ ಎಲ್ ನ ವೈಜ್ಞಾನಿಕ ಅಧಿಕಾರಿಯಾದ ಚಾಸಾ.11 ರವರು ದಿಃ 30-03-2023 ರ ವರದಿಯನ್ನು ಎಫ್.ಎಲ್.ಎಂ.ಎಸ್ ನಲ್ಲಿ ಅಪಲೋಡ್ ಮಾಡಿದ್ದು ಅದನ್ನು ನಾನು ಸದರಿ ತಂತ್ರಾಂಶದಲ್ಲಿ ದಿಃ 05-04-2023 ರಂದು ಡೌನ್ ಲೋಡ್ ಮಾಡಿಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ವರದಿಯನ್ನು ಮತ್ತು ಅದರಲ್ಲಿರುವ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.52 ಎಂದು ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.52(ಎ) ಎಂದು ಗುರುತಿಸಲಾಯಿತು.

25. ಎಫ್ ಎಸ್ ಎಲ್ ನ ವೈಜ್ಞಾನಿಕ ಅಧಿಕಾರಿಯಾದ ಫ್ರಾಸಾ.10 ರವರು ದಿಃ 24-04-2023 ರ ವರದಿಯನ್ನು ಎಫ್.ಎಲ್.ಎಂ.ಎಸ್ ನಲ್ಲಿ ಅಪಲೋಡ್ ಮಾಡಿದ್ದು ಅದನ್ನು ನಾನು ಸದರಿ ತಂತ್ರಾಂಶದಲ್ಲಿ ದಿಃ 27-04-2023 ರಂದು ಡೌನ್ ಲೋಡ್ ಮಾಡಿಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ವರದಿಯನ್ನು ಮತ್ತು ಅದರಲ್ಲಿರುವ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.43 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.43(ಎ) ಎಂದು ಗುರುತಿಸಲಾಯಿತು. ಸದರಿ ವರದಿಗಳನ್ನು ಫ್ರಾಸಾ.9 ರವರು ನನ್ನ ಸೂಚನೆಯ ಮೇರೆಗೆ ಯಥಾ ಸ್ಥಿತಿಯಲ್ಲಿ ಡೌನ್ ಲೋಡ್ ಮಾಡಿಕೊಟ್ಟು ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

26. ದಿಃ 05-05-2023 ರಂದು ಪ್ರಾಸಾ.6 ರವರಿಂದ ಕೃತ್ಯ ನಡೆದ ಸ್ಥಳಕ್ಕೆ ಸಂಬಂಧಿಸಿದ ದಾಖಲಾತಿಯನ್ನು ವರದಿಯೊಂದಿಗೆ ಪಡೆದುಕೊಂಡೆನು. ಸದರಿ ದಾಖಲೆಗಳ ಪ್ರಕಾರ ಕೃತ್ಯ ನಡೆದ ಸ್ಥಳವು ಪ್ರಾಸಾ.1 ರವರ ಮಾವ ಅಂದರೆ ಮೃತನ ತಂದೆಯಾದ ನೀಲಯ್ಯ ಪೂಜಾರಿರವರ ಹೆಸರಿನಲ್ಲಿ ಇರುತ್ತದೆ.

27. ಸದರಿ ವರದಿಯನ್ನು ಮತ್ತು ದಾಖಲೆಯನ್ನು ಮತ್ತು ಅವುಗಳಲ್ಲಿರುವ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.33 ಮತ್ತು ಪಿ.34 ಎಂದು ಗುರುತಿಸಲಾಗಿದ್ದು, ನಿಪಿ.33 ರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.33(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ದಿಃ 05-05-2023 ರಂದು ಪಡೆದುಕೊಂಡಿದ್ದೇನೆ, ಆದರೆ ಕೈ ತಪ್ಪಿನಿಂದಾಗಿ ದಿನಾಂಕವನ್ನು 05-04-2023 ಎಂದು ನಮೂದಿಸಿದ್ದೇನೆ.

28. ಅದೇ ದಿನ ಪ್ರಾಸಾ.7 ರವರಿಂದ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ಪತ್ರದೊಂದಿಗೆ ಪಡೆದುಕೊಂಡೆನು. ಸದರಿ ನಕ್ಷೆ ಮತ್ತು ಪತ್ರವನು ಮತ್ತು ಅವುಗಳಲ್ಲಿರುವ ಸ್ವೀಕೃತಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.36 ಮತ್ತು ಪಿ.37 ಎಂದು ಗುರುತಿಸಲಾಗಿದ್ದು, ನಿಪಿ.36 ರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.36(ಬಿ) ಎಂದು ಗುರುತಿಸಲಾಯಿತು.

29. ಮಹಜರ್ ಕಾಲಕ್ಕೆ ನನ್ನ ಸೂಚನೆಯ ಮೇರೆಗೆ ಫ್ರಾಸಾ.9 ರವರು ತೆಗೆದ ಫೋಟೋಗಳನ್ನು ನಾನು ಸೂಚಿಸಿದಂತೆ ಒಂದು ಖಾಲಿ ಸಿಡಿ ಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿ ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ರಡಿಯಲ್ಲಿ ದೃಢೀಕರಣ ಪತ್ರದೊಂದಿಗೆ ನೀಡಿರುತ್ತಾರೆ. ಸದರಿ ಸಿಡಿ ಮತ್ತು ದೃಢೀಕರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ.41 ಮತ್ತು ಪಿ.42 ಎಂದು ಗುರುತಿಸಲಾಗಿದ್ದು, ನಿಪಿ.42 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.42(ಬಿ) ಎಂದು ಗುರುತಿಸಲಾಯಿತು.

30. ಕೃತ್ಯಕ್ಕೆ ಬಳಸಲಾದ ಆಯುಧವನ್ನು ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರಾದ ಫ್ರಾಸಾ.5 ರವರಿಗೆ ಕಳುಹಿಸಿಕೊಟ್ಟು ಅವರು ಮರಣೋತ್ತರ ಪರೀಕ್ಷೆಯಲ್ಲಿ ತಿಳಿಸಿರುವ ಗಾಯಗಳು ಸದರಿ ಆಯುಧದಿಂದ ಆಗುವ ಸಾಧ್ಯತೆಯ ಬಗ್ಗೆ ವರದಿ ನೀಡುವಂತೆ ಕೋರಲು ಮನವಿಯನ್ನು ತಯಾರಿಸಿದ್ದೆನು. ಆದರೆ ಅಷ್ಟರಲ್ಲಿ ಫ್ರಾಸಾ.5 ರವರು ಲಕ್ಷದ್ವೀಪಕ್ಕೆ ಕೆಲಸದ ಮೇರೆಗೆ 6 ತಿಂಗಳವರೆಗೆ ತೆರಳಿದ್ದರಿಂದ ನನಗೆ ಮನವಿಯನ್ನು ಅವರಿಗೆ ಸಲ್ಲಿಸಲು ಸಾಧ್ಯವಾಗಲಿಲ್ಲ, ಆದರೆ ಅವರು ಆ ಬಗ್ಗೆ ತಮ್ಮ ಅಭಿಪ್ರಾಯವನ್ನು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವ ಕಾಲಕ್ಕೆ ತಿಳಿಸುವುದಾಗಿ ನನಗೆ ದೂರವಾಣಿ ಮೂಲಕ ತಿಳಿಸಿದ್ದರು.

31. ದಿಃ 07-06-2023 ರಂದು ತನಿಖೆಯನ್ನು ಪೂರ್ಣಗೊಳಿಸಿ ತನಿಖೆಯಲ್ಲಿ ಆರೋಪಿಯ ವಿರುದ್ಧ ಆರೋಪ

ಸಾಬೀತಾಗಿದ್ದರಿಂದ ಆತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದೆನು. ಈ ದಿನ ವಿಡಿಯೋ ಕಾನ್ಪರೇನ್ಸಿಂಗ್ ಮುಖಾಂತರ ಹಾಜರಪಡಿಸಿದ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ</u>

**(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ